
# ಆಗಸದಲ್ಲಿ 'ಸ್ಟಾರ್‌ಲಿಂಕ್' ಸರಮಾಲೆ!

■ **ಶಶಿಕುಮಾರ್ ಸಿ.**



ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಇತ್ತೀಚೆಗೆ ರಾತ್ರಿ ವೇಳೆ ಆಗಸದಲ್ಲಿ ಬೆಳಕಿನ ಸರಮಾಲೆ ಕಂಡು ಜನರು ಚಕಿತರಾಗಿದ್ದರು. ತಾವು ಕಂಡ ನಕ್ಷತ್ರಗಳ ಸರಮಾಲೆಯನ್ನು ತಮ್ಮ ತಮ್ಮ ಮೊಬೈಲ್‌ಗಳಲ್ಲಿ, ಕ್ಯಾಮೆರಾಗಳಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲೂ ಆ ದೃಶ್ಯಗಳನ್ನು ಹಂಚಿಕೊಂಡಿದ್ದರು. ಹಾಗೆಯೇ ಅವರೆಲ್ಲರ ತಲೆಯನ್ನು ಅವು ನಕ್ಷತ್ರಗಳೇ ಅಥವಾ ಉಪಗ್ರಹಗಳೇ ಎಂಬ ಗೊಂದಲ ಹೊಕ್ಕಿತ್ತು.

ಉತ್ತರ ಕನ್ನಡದ ಕಡಲ ತೀರ, ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ ಸೇರಿದಂತೆ ಹಲವು ಕಡೆ ಈ ಕೌತುಕ ಕಂಡಿದ್ದಾಗಿ ವರದಿಯಾಗಿತ್ತು. ಅದಕ್ಕೆ ವಿಜ್ಞಾನಿಗಳು ನೀಡಿರುವ ಸ್ಪಷ್ಟನೆ – 'ಅದು ಉಪಗ್ರಹಗಳ ಸರಮಾಲೆ'. ಈ ಬೆಳಕಿನ ಸರಮಾಲೆ ಜನರ ಕಣ್ಣಿಗೆ ಕಾಣಿಸುವ ಒಂದೆರಡು ದಿನಗಳ ಹಿಂದೆ 'ಸ್ಪೇಸ್ ಎಕ್ಸ್' ಕಂಪನಿಯು ಉಪಗ್ರಹಗಳ ಮೂಲಕ ಇಂಟರ್ನೆಟ್ ಸೇವೆಯನ್ನು ಒದಗಿಸುವ 'ಸ್ಟಾರ್‌ಲಿಂಕ್' ಯೋಜನೆಯ ಸಲುವಾಗಿ ಅಮೆರಿಕದ ಕ್ಯಾಲಿಫೋರ್ನಿಯಾದಿಂದ 52 ಉಪಗ್ರಹಗಳನ್ನು ಉಡಾವಣೆ ಮಾಡಿತ್ತು. ಅವು ಯಶಸ್ವಿಯಾಗಿ ಕಕ್ಷೆಯನ್ನೂ ಸೇರಿದ್ದವು.

ಈ ಬಗ್ಗೆ ಮಾಹಿತಿ ನೀಡುವ ಖಗೋಳ ಅಧ್ಯಯನ ಸಂಸ್ಥೆ 'ಆಗಸ್ 360'ಯ ಸ್ಥಾಪಕ ಶಿರಸಿಯ ವಸಂತ ಹೆಗಡೆ ಬೈರುಂಬೆ, 'ಈ ಉಪಗ್ರಹಗಳಲ್ಲಿ ಅಳವಡಿಸಿರುವ ಸೌರ ಫಲಕಗಳ ಮೇಲೆ ಕೆಲವು ಕೋನದಲ್ಲಿ ಸೂರ್ಯನ ಕಿರಣಗಳು ಬಿದ್ದಾಗ ಅವು ಪ್ರತಿಫಲಿಸುತ್ತವೆ. ಇವು ಭೂಮಿಯಿಂದ ಬಹಳ ಎತ್ತರದ ಕಕ್ಷೆಯಲ್ಲಿಲ್ಲ. ಹಾಗಾಗಿ ಬರಿಗಣ್ಣಿಗೆ ಬಲ್ಬ್‌ನ ಮಾಲೆಯಂತೆ ಕಂಡಿವೆ. ಇವುಗಳನ್ನು ಕೆಲವರು ಹಾರುವ ತಟ್ಟೆಗಳು ಎಂದು ಭಾವಿಸಿ ಆಶ್ಚರ್ಯ ಪಟ್ಟಿದ್ದುಂಟು' ಎಂದು ಮಾಹಿತಿ ನೀಡಿದ್ದಾರೆ.

'ಸ್ಪೇಸ್‌ಎಕ್ಸ್' ಕಂಪನಿಯು ಇದುವರೆಗೆ 34 ಬಾರಿ ತನ್ನ ಉಪಗ್ರಹಗಳನ್ನು ಉಡಾವಣೆಗೊಳಿಸಿದ್ದು, ಒಟ್ಟು 1732 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿದೆ. 'ಸ್ಟಾರ್‌ಲಿಂಕ್' ಯೋಜನೆಯ ಸಲುವಾಗಿ ಸದ್ಯ ಭೂಮಿಯ ಕೆಳಹಂತದ ಕಕ್ಷೆಗೆ ಸುಮಾರು 12,000 ಉಪಗ್ರಹಗಳನ್ನು ಸೇರಿಸುವ ಗುರಿ ಹೊಂದಿರುವ ಕಂಪನಿಯು ಭವಿಷ್ಯದಲ್ಲಿ 42,000 ಉಪಗ್ರಹಗಳನ್ನು ಉಡಾಯಿಸುವ ಯೋಜನೆಯನ್ನೂ ಹೊಂದಿದೆ.

ಅಂತರಿಕ್ಷಕ್ಕೆ ಇಷ್ಟೊಂದು ಉಪಗ್ರಹಗಳನ್ನು ಕಳಿಸಿದರೆ ಅಲ್ಲಿಯೂ ಸ್ಯಾಟಲೈಟ್‌ಗಳ ಟ್ರಾಫಿಕ್ ಜಾಮ್ ಸಮಸ್ಯೆ ಉಂಟಾಗದೆ ಎಂಬ ಪ್ರಶ್ನೆಯೂ ಇದೇ ಸಮಯದಲ್ಲಿ ಉದ್ಭವಗೊಂಡಿದೆ. ಒಂದೇ ಕಂಪನಿಯು ಇಷ್ಟೊಂದು ಉಪಗ್ರಹಗಳನ್ನು ಉಡಾವಣೆ ಮಾಡುವುದರಿಂದ ಇತರ ದೇಶಗಳ ಬಾಹ್ಯಾಕಾಶ ಚಟುವಟಿಕೆಗಳಿಗೆ ಸಮಸ್ಯೆ ಉಂಟಾಗದೇ ಎಂಬ ಪ್ರಶ್ನೆಯನ್ನೂ ಹಲವರು ಎತ್ತಿದ್ದಾರೆ. ■

# ಒಟಿಪಿ ಕದಿಯುವ ವೈರಸ್!



ಕೆಲ ಆ್ಯಪ್‌ಗಳಲ್ಲಿನ 'ಟ್ರೋಜನ್ ಜೋಕರ್' ಮಾಲ್‌ವೇರ್ ಅನ್ನು ಗುರುತಿಸಿ ಸುಮಾರು 14 ಆ್ಯಪ್‌ಗಳನ್ನು ಗೂಗಲ್ ಈಚೆಗಷ್ಟೇ ಪ್ಲೇಸ್ಟೋರ್‌ನಿಂದ ತೆಗೆದುಹಾಕಿತ್ತು. ಅದರ ಹೊರತಾಗಿಯೂ ಮೊಬೈಲ್ ಸೆಕ್ಯುರಿಟಿ ಸೊಲ್ಯೂಷನ್ಸ್ ಸಂಸ್ಥೆ 'ಪ್ರಡಿಯೊ'ವು ಗೂಗಲ್ ಪ್ಲೇ ಸ್ಟೋರ್‌ನಲ್ಲಿರುವ ಇನ್ನೂ ಕೆಲ ಆ್ಯಪ್‌ಗಳ ಮೇಲೆ ಟ್ರೋಜನ್ ಜೋಕರ್ ಮಾಲ್‌ವೇರ್‌ನ ದಾಳಿ ಮಾಡಿದ್ದು, ಅದರಿಂದ ಮೊಬೈಲ್‌ಗೆ ರವಾನೆಯಾಗುವ ಒಟಿಪಿಯನ್ನೂ ಕದಿಯುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ.

ಗೂಗಲ್‌ನ ಸೆಕ್ಯುರಿಟಿ ಸಾಮರ್ಥ್ಯವನ್ನು ಮೀರಿ ಅದರ ಕೋಡ್‌ಗೆ ಸಣ್ಣ ಬದಲಾವಣೆ ತಂದು 'ಟ್ರೋಜನ್ ಜೋಕರ್' ಮಾಲ್‌ವೇರ್ ಮತ್ತೆ ವಕ್ಕರಿಸಿದೆ. ವೈರಸ್ ಸೋಂಕಿತ ಆ್ಯಪ್‌ಗಳು ರಹಸ್ಯವಾಗಿ ಜಾಹೀರಾತು ವೆಬ್‌ಸೈಟ್‌ಗಳೊಂದಿಗೆ ಸಂವಹನದ ಆರಂಭಕ್ಕೆ ಪ್ರಚೋದನೆ ನೀಡುತ್ತವೆ. ಅದಕ್ಕಾಗಿಯೇ ಎಸ್‌ಎಂಎಸ್‌ಗಳಲ್ಲಿನ ಮಾಹಿತಿಯನ್ನು ಕದಿಯುತ್ತಿರುವ ಅವು ಸಂಪರ್ಕ ಸಂಖ್ಯೆಯ ಪಟ್ಟಿ ಮತ್ತು ಸಾಧನದ ಮಾಹಿತಿಯನ್ನೂ ಪಡೆದುಕೊಳ್ಳುತ್ತಿವೆ ಎಂದಿದೆ ಸಂಸ್ಥೆ.

'ಟ್ರೋಜನ್ ಜೋಕರ್' ಮಾಲ್‌ವೇರ್ ಬಳಕೆದಾರರ ಅರಿವಿಗೆ ಬಾರದಂತೆ ಅವರ ಬ್ಯಾಂಕ್ ಖಾತೆಗಳಲ್ಲಿನ ಹಣವನ್ನು ಕದಿಯುತ್ತದೆ. ಬಳಕೆದಾರರಿಗೆ ತಿಳಿಯದಂತೆ ಕೆಲ ಪ್ರೀಮಿಯಂ ಸೇವೆಗಳಿಗೆ ಚಂದಾದಾರರಾಗಲು ನಿರಂತರವಾಗಿ ಎಸ್‌ಎಂಎಸ್ ಕಳುಹಿಸುವ ಮೂಲಕ ಪ್ರಚೋದಿಸುತ್ತದೆ. ಅಲ್ಲದೆ ಬಳಕೆದಾರರ ಅನುಮತಿಯಿಲ್ಲದೆ ಆನ್‌ಲೈನ್‌ನಲ್ಲಿ ಪಾವತಿಸಿದ ಸೇವೆಗೆ ಚಂದಾದಾರರಾಗಿಸುತ್ತದೆ. ಆನ್‌ಲೈನ್ ಜಾಹೀರಾತುಗಳ ಮೇಲೆ ಸ್ವಯಂಚಾಲಿತವಾಗಿ ಕ್ಲಿಕ್ ಆಗುವಂತೆ ಮಾಡುತ್ತದೆ. ಒಟಿಪಿಯನ್ನೂ ಬಳಕೆದಾರರಿಗೆ ಕಳುಹಿಸದಂತೆ ತಡೆದು ರಹಸ್ಯವಾಗಿ ಅದನ್ನು ಕದ್ದು ದುರುಪಯೋಗ ಮಾಡಿಕೊಳ್ಳುತ್ತದೆ ಎಂಬುದು ಸಂಸ್ಥೆಯು ತಿಳಿಸಿರುವ ಆಘಾತಕಾರಿ ಸಂಗತಿ.

### 'ಪ್ರಡಿಯೊ' ಸೂಚಿತ ಆ್ಯಪ್‌ಗಳು

ಕಲರ್ ಮೆಸೇಜ್, ಸೇಫ್ಟಿ ಆ್ಯಪ್‌ಲಾಕ್, ಕನ್ವಿನೆಂಟ್ ಸ್ಕ್ಯಾನರ್ 2, ಪುಶ್ ಮೆಸೇಜ್ ಟೆಕ್ಸ್ಟಿಂಗ್ ಆ್ಯಂಡ್ ಎಸ್‌ಎಂಎಸ್, ಎಮೊಜಿ ವಾಲ್‌ಪೇಪರ್, ಸೆಪರೇಟ್ ಡಾಕ್ ಸ್ಕ್ಯಾನರ್, ಫಿಂಗರ್‌ಟಿಪ್ ಗೇಮ್‌ಬಾಕ್ಸ್. ■